ಆಗಿರುವಂತಹ 351 ಮನೆಗಳಿಗೆ ಮಾನವೀಯತೆಯ ದೃಷ್ಟಿಯಿಂದ ಹಣ ಬಿಡುಗಡೆ ಮಾಡುವ ಸಂಬಂಧ ಮಾನ್ಯ ವಸತಿ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಎಂ.ಹೆಚ್. ಅಂಬರೀಶ್ (ಮಾನ್ಯ ವಸತಿ ಸಚಿವರು): ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವುದರಲ್ಲಿ ಅರ್ಥ ಇದೆ. ನಾವು ಅಲ್ಲಿ ಸುಮ್ಮಸುಮ್ಮನೆ Cancel ಮಾಡಿರುವುದಿಲ್ಲ ಮತ್ತು unblock ಮಾಡಿರುವುದಿಲ್ಲ. ಅನರ್ಹತೆ ಎಂದು Prove ಆದ ಮೇಲೆಯೇ Cancel ಮಾಡಿದ್ದೇನೆ. ನಾನು ಹೆಚ್ಚಿಗೆ ಟೈಮ್ ತೆಗೆದುಕೊಂಡು ಮಾತನಾಡುವುದಿಲ್ಲ. ನೀವು ಏನಾದರೂ ಮಾಡಿ ಸಿಇಓ ಹತ್ತಿರ ಮಾತನಾಡಿ, ಅದಕ್ಕೆ ಅರ್ಹತೆ ಇದೆ ಎಂದು ಹೇಳಿದರೆ ನಿಮಗೆ ಹಣ ಬಿಡುಗಡೆ ಮಾಡುತ್ತೇನೆ.

ಅಧ್ಯಕ್ಷರು: ಆಯಿತು, ಮಾನ್ಯ ಸಿ.ಟಿ.ರವಿ ಮತ್ತು ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರೇ ನಿಮ್ಮದು ಎರಡೂ ಆಗಿದೆ. ಇದನ್ನು ಮುಂದಕ್ಕೆ ಹಾಕುತ್ತೇನೆ. ಮಾನ್ಯ ಬೋಪಯ್ಯನವರೆ, ತಾವು ಮಾತನಾಡಿ.

4. ವಿಷಯ: ಹಿಂದೆ ಇದ್ದ Circular ಅನ್ನು ಮುಂದುವರೆಸುವ ಬಗ್ಗೆ

ಶ್ರೀ ಕೆ.ಜಿ.ಬೋಪಯ್ಯ (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಈ ಬಿಸಿಎಂ ಮತ್ತು ಎಸ್‌ಸಿ:ಎಸ್‌ಟಿ ಹಾಸ್ಟೆಲ್‌ಗಳಿಗೆ ಸಂಬಂಧಿಸಿದಂತೆ ಒಂದು Circular ಅನ್ನು ಸರ್ಕಾರವು ಹೊರಡಿಸಿದೆ. ಹಿಂದೆ ಏನು 50 ಸೀಟ್ ಇತ್ತು ಅದನ್ನು ಈಗ 35 ಸೀಟ್ ಎಂದು ಮಾಡಿ ಎಂಬ ಬಗ್ಗೆ ಸುತ್ತೋಲೆಯನ್ನು ಕಳುಹಿಸಿದ್ದಾರೆ.

ಅಧ್ಯಕ್ಷರು : ಹಿಂದೆ ಏನು Circular ಇತ್ತೋ ಅದನ್ನು ಈಗ ಅದನ್ನು ಮುಂದುವರಿಸಬೇಕೆಂದು ಕೇಳುತ್ತೀರಲ್ಲವೇ ?

ಶ್ರೀ ಕೆ.ಜಿ.ಬೋಪಯ್ಯ: ನಾನು ಈ ಹಿಂದೆ ನೀವು ಮಾಡಿರುವುದು ಸರಿಯಲ್ಲವೆಂದು ಪತ್ರವನ್ನೂ ಸಹ ಬರೆದಿದ್ದೆ.

ಅಧ್ಯಕ್ಷರು : ಮಾನ್ಯ ಸಚಿವರೆ, ಹಿಂದೆ ಎಷ್ಟು ಸೀಟ್ ಇತ್ತೋ ಅದನ್ನು continue ಮಾಡಿ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮಾನ್ಯ ಸಮಾಜ ಕಲ್ಯಾಣ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ತಾವು raise ಮಾಡಿದ್ದೀರಿ, ನಾನು ಸಂಬಂಧಪಟ್ಟಂತಹ ಮಂತ್ರಿಗಳಿಗೆ ಹೇಳಿ ನಾಳೆ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಕೆ.ಜಿ.ಬೋಪಯ್ಯ: ನಾನು ಮಾನ್ಯ ಸಚಿವರಿಗೂ ಪತ್ರ ಬರೆದಿದ್ದರೂ ಅದಕ್ಕೆ ಅವರಿಂದ ಉತ್ತರ ಬರಲಿಲ್ಲವಲ್ಲಾ? ಅವರು ಹೇಗೆ ಕೆಲಸ ಮಾಡುತ್ತಾರೆಂದು ಗೊತ್ತಾಗುತ್ತಿಲ್ಲ. ತಾವು continue ಮಾಡಿಸುತ್ತೇವೆಂದು ಹೇಳಿ.

ಶ್ರೀ ಆರ್.ಅಶೋಕ್ : ಮಾನ್ಯ ಸಭಾಧ್ಯಕ್ಷರು continue ಮಾಡಿ ಎಂದು ಹೇಳಿದ್ದಾರಲ್ಲಾ ? ಈ ಬಗ್ಗೆ ಅವರಿಗೂ ಸಹ ಗೊತ್ತಿದೆಯಲ್ಲಾ ?

ಶ್ರೀ ಟಿ.ಬಿ.ಜಯಚಂದ್ರ : ಈ ಬಗ್ಗೆ ಮಾನ್ಯ ಸಚಿವರಿಂದ ನಾಳೆ ಉತ್ತರ ಕೊಡಿಸುತ್ತೇನೆ.

ಶ್ರೀ ಕೆ.ಜಿ.ಬೋಪಯ್ಯ : Continue ಮಾಡಿಸುತ್ತೇವೆಂದು ಹೇಳಿ ನಮ್ಮ ಜಿಲ್ಲೆಯಲ್ಲಿ 93% ಹಳ್ಳಿಯ ಮಕ್ಕಳು ಇದ್ದಾರೆ ಅವರು ಎಲ್ಲಿಗೆ ಹೋಗಬೇಕು?

ಅಧ್ಯಕ್ಷರು : ಆಯಿತು.

ಒಬ್ಬ ಮಾನ್ಯ ಸದಸ್ಯರು : ಅಲ್ಲಿ ಇದ್ದದನ್ನು Continue ಮಾಡುವುದಲ್ಲ, ಕೆಲವೊಂದು ಜಿಲ್ಲೆಗಳಲ್ಲಿ ಅದನ್ನು excess ಮಾಡಬೇಕಾಗಿದೆ.

ಶ್ರೀ ಮಾನಪ್ಪ ಡಿ. ವಜ್ಜಲ್: ಹಾಸ್ಟೆಲ್‌ಗಳಲ್ಲಿ 50ಕ್ಕೆ ಇದ್ದಂತಹ ಬೇಡಿಕೆಗಳು ಇವತ್ತಿನದಿವಸ 700ಕ್ಕೆ ಬಂದಿದೆ.

ಅಧ್ಯಕ್ಷರು : ಅದು ಸಮಾಜಕಲ್ಯಾಣ ಇಲಾಖೆಗೆ ಬರುತ್ತದೆ. ಆಗ ಈ ಬಗ್ಗೆ ತಾವು ಚರ್ಚೆ ಮಾಡಿ. ಆಗ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡೋಣ. ಮಾನ್ಯ ಸುನೀಲ್ ಕುಮಾರ್‌ರವರೆ, ತಾವು ಮಾತನಾಡಿ.

5. ವಿಷಯ : ಶ್ರೀ ವಿಮಲಾನಂದ ಸ್ವಾಮೀಜಿಯವರ ಮೃತದೇಹವನ್ನು ಹೊರ ತೆಗೆಯುವ ಬಗ್ಗೆ.